

ಖಂಡಗಿರಿ ಶಿಖರದ ಮಾರ್ಗದಲ್ಲಿನ ಕೆಲವು ಗುಹೆಗಳು

# ಭುವನೇಶ್ವರದ ಭುವನ ಮನೋಹರ ಗವಿಗಳು

**ಒಡಿಸ್ಸಾದ 'ಉದಯಗಿರಿ' ಮತ್ತು 'ಖಂಡಗಿರಿ' ಬೆಟ್ಟಗಳಲ್ಲಿರುವ ಗುಹೆಗಳು ತಮ್ಮ ಅದ್ಭುತ ವಾಸ್ತುಶಿಲ್ಪದಿಂದಲೂ ಚಾರಿತ್ರಿಕ ಹಿನ್ನೆಲೆಯಿಂದಲೂ ಸಹೃದಯರ ಗಮನಸೆಳೆಯುತ್ತವೆ. ಬಹುತ್ವ ಭಾರತದ ಪ್ರೀತಿ, ಸಹಾನುಭೂತಿ, ಧಾರ್ಮಿಕ ಸಹಿಷ್ಣುತೆಗಳ ಪ್ರಯೋಗಶಾಲೆಗಳಂತೆ ಈ ಗುಹೆಗಳು ಭಾಸವಾಗುತ್ತವೆ.**

**■ ವಿಜಯ್ ಹೆಮ್ಮಿಗೆ**

ಒಡಿಸ್ಸಾದ ರಾಜಧಾನಿ ಭುವನೇಶ್ವರದಿಂದ ಸುಮಾರು 9 ಕಿ.ಮೀ. ಅಂತರದಲ್ಲಿ ಹೊರಗೆ ಎರಡು ಅವಳಿ ಬೆಟ್ಟಗಳಿವೆ. ಭುವನೇಶ್ವರಕ್ಕೆ ಭೇಟಿ ನೀಡುವ ಪ್ರವಾಸಿಗರು ಒಡಿಸ್ಸಾದ ಭವ್ಯ ಪರಂಪರೆಯ ಈ ಗುಹೆಗಳಿಗೆ ಒಮ್ಮೆ ಭೇಟಿ ನೀಡಲೇಬೇಕು.

'ಉದಯಗಿರಿ' ಮತ್ತು 'ಖಂಡಗಿರಿ' ಎನ್ನುವ ಬೆಟ್ಟಗಳ ಮೇಲೆ ಇರುವ ಕಾರಣಕ್ಕಾಗಿ ಆ ಗುಹೆಗಳಿಗೂ ಅದೇ ಹೆಸರು ಬಂದಿದೆ. ಎರಡು ಬೆಟ್ಟಗಳಲ್ಲಿಯೂ ಬಹಳಷ್ಟು ಸಂಖ್ಯೆಯ ಗುಹೆಗಳಿದ್ದು, ಅವುಗಳನ್ನು ಮಹಾಮೇಘವಾಹನ ರಾಜವಂಶಕ್ಕೆ ಸೇರಿದ ರಾಜ ಖರವೇಲನ ಆಳ್ವಿಕೆಯಲ್ಲಿ ಜೈನ ಮುನಿಗಳು ಮತ್ತು ಕುಶಲಕರ್ಮಿಗಳು ನಿರ್ಮಿಸಿರುವುದಾಗಿ ಲಭ್ಯವಿರುವ ಶಾಸನಗಳ ಮೂಲಕ ತಿಳಿದು ಬರುತ್ತದೆ. ಆ ಗುಹೆಗಳು ಪ್ರಾಚೀನ ಭಾರತದ ವಾಸ್ತುಶಿಲ್ಪಕ್ಕೆ ಹಿಡಿದ ಕೈಗನ್ನಡಿಯ ಜೊತೆಗೆ, ಪ್ರೀತಿ, ಸಹಾನುಭೂತಿ ಮತ್ತು ಧಾರ್ಮಿಕ ಸಹಿಷ್ಣುತೆಗಳ ಸಂದೇಶವನ್ನು ಸಾರುತ್ತಿವೆ. ಇತಿಹಾಸದಲ್ಲಿ ಆ ಗವಿಗಳು ಒಂದನೇ ಮತ್ತು ಎರಡನೇ ಶತಮಾನಗಳಲ್ಲಿ ನಿರ್ಮಿತವಾಗಿರುವುದಾಗಿಯೂ ತಿಳಿದು ಬರುತ್ತದೆ.

ಉದಯಗಿರಿ ಬೆಟ್ಟದ ಮೇಲಿನ ರಾಣಿ ಗುಹೆಯು ಅತ್ಯಂತ ದೊಡ್ಡದು ಮತ್ತು ಈ ಗವಿಯಲ್ಲಿ ವಾಸ್ತುಶಿಲ್ಪದ ವೈಭವವನ್ನು ಕಾಣಬಹುದು. ಅದು ಎರಡು ಅಂತಸ್ತಿನ ಬಸದಿಯಾಗಿದ್ದು, ಅದಕ್ಕೆ ಕೆಲವು ಕಂಬಗಳನ್ನು ಕೂಡ ಜೋಡಿಸಿದ್ದಾರೆ. ಆ ಗುಹೆಯಲ್ಲಿ ನಾಟ್ಯ ಮಾಡುತ್ತಿರುವ ಹೆಂಗಸರು, ರಾಜಮನೆತನದ ಶ್ರೀಮಂತಿಕೆ, ಕೆಲವು ಸಂಗೀತ ಉಪಕರಣಗಳನ್ನು ಕೆತ್ತಿದ್ದಾರೆ. ಗುಹೆ 14ನ್ನು 'ಹಾತಿ ಗುಫ' ಎಂದೂ 'ಆನೆ ಗುಹೆ' ಎಂದೂ ಕರೆಯುವುದುಂಟು. ಆನೆ ಗುಹೆಯಲ್ಲಿನ ಶಿಲಾಶಾಸನದ ಪ್ರಕಾರ ಅಂದಿನ